ಶಿವರಾಂರವರೇ, ನೀವು ಈ ರೀತಿ ಪದೇ ಪದೇ ಎದ್ದು ನಿಂತು ಹೇಳುವುದು ಸರಿಯಿಲ್ಲ. ಇದನ್ನು ಇಲ್ಲಿಗೆ ಮುಕ್ತಾಯ ಮಾಡುತ್ತೇನೆ. ನಾನು ಹೇಳುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇದು ಸರಿಯಿಲ್ಲ.

ಶ್ರೀ ಎ. ಟಿ.ರಾಮಸ್ವಾಮಿ : ಅವರು ರಿಜಿಸ್ಟ್ರೇಷನ್ ಮಾಡಿಕೊಡುತ್ತೇವೆಂದು ಹೇಳಿದ್ದರು, ಆದರೆ ಇದುವರೆಗೆ ಮಾಡಿಸಿಕೊಡಲಿಲ್ಲ.

ಉಪಾಧ್ಯಕ್ಷರು : ಎಸ್. ಎಸ್. ಪಾಟೀಲರು ಬಂದು ಹೇಳಿಕೆ ಕೊಡುತ್ತಾರೆ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎ. ಟಿ. ರಾಮಸ್ವಾಮಿ : ಇಲ್ಲವಾದರೆ ನಾವು ಇದನ್ನುಪ್ರತಿಭಟಿಸಿ ಧರಣಿ ಮಾಡಬೇಕಾಗುತ್ತದೆ.

ಶ್ರೀ ಎಂ. ಸಿ. ನಾಣಯ್ಯ : ಪ್ರತಿಯೊಂದಕ್ಕೆ ಧರಣಿ ಮಾಡಿದರೆ,ಇದು ಏನು ಕಥೆನಾ?

(ಗೊಂದಲ)

ಉಪಾಧ್ಯಕ್ಷರು : ನಿಮ್ಮ ಸದಸ್ಯರಿಗೆ, ನೀವು ಸ್ವಲ್ಪ ಹೇಳಬೇಕು. ಎಸ್. ಎಸ್. ಪಾಟೀಲರು ಬಂದ ಮೇಲೆ ಹೇಳಿಕೆಯನ್ನು ಕೊಡುತ್ತಾರೆ. ತಾವು ಪ್ರತಿಯೊಂದಕ್ಕೆ ಧರಣಿ, ಧರಣಿ ಎಂದು ಹೇಳಿದರೆ ಏನು?

(ಶ್ರೀ ಎ. ಟಿ. ರಾಮಸ್ವಾಮಿ ಮತ್ತು ಶ್ರೀ ಬಿ. ಶಿವರಾಂರವರು ಧರಣಿ ಕುಳಿತರು)

ಉಪಾಧ್ಯಕ್ಷರು : ದಯಮಾಡಿ ತಮ್ಮ ತಮ್ಮ ಸ್ಥಾನಕ್ಕೆ ಹೋಗಿ, ನಾನು ಹೇಳುವುದನ್ನು ಕೇಳಿ, ಸಹಕಾರ ಸಚಿವರು ಈಗ ಬಂದು ಹೇಳಿಕೆ ಕೊಡುತ್ತಾರೆ. ಇದು ಒಳ್ಳೆಯಕದಲ್ಲ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಹಕಾರ ಸಚಿವರು ಬಂದು ಇದರ ಬಗ್ಗೆ ವಿವರವಾದಂಥ ಉತ್ತರವನ್ನು ಕೊಡುತ್ತಾರೆ. ದಯಮಾಡಿ ಮಾನ್ಯ ಸದಸ್ಯರುಗಳು ಧರಣಿ ಮಾಡುವುದನ್ನು ಬಿಟ್ಟು ತಮ್ಮ ಸ್ಥಾನಕ್ಕೆ ಹೋಗಬಹುದು.

(ಭಾವಿಯಲ್ಲಿ ಧರಣಿ ಕುಳಿತಿದ್ದ ಮಾನ್ಯ ಸದಸ್ಯರುಗಳಾದ ಬಿ. ಶಿವರಾಮುರವರು ಹಾಗೂ ಎ.ಟಿ. ರಾಮಸ್ವಾಮಿಯವರು ತಮ್ಮ ಸ್ಥಾನಗಳಿಗೆ ಹಿಂದಿರುಗಿದರು)

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ : ನಾವು ಮಹಿಳೆಯರು ಬ್ಯಾಂಕ್ ಮಾಡಬೇಕಾದರೆ ನಾವು ಕೂಡ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಿ.